# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 44

ಸ್ವಾಮಿ ನಿತ್ಯಸ್ಥಾನಂದ

## ಭಾವಮುಖಾವಸ್ಥೆ

ಶ್ರೀರಾಮಕೃಷ್ಣರು: ‘‘ಹಲಧಾರಿ ಹೇಳುತ್ತಿದ್ದ, ಭಗವಂತ ಭಾವ ಅಭಾವಗಳಿಗೆ ಅತೀತ ಎಂಬುದಾಗಿ. ನಾನು ನೋಡಿ ಆತ ಹೇಳಿದುದನ್ನು ಭಗವತಿಗೆ ತಿಳಿಸಿ ಆಕೆಯನ್ನು ಕೇಳಿದೆ: ‘ತಾಯೆ, ಹಾಗಾದರೆ ಭಗವದ್ರೂಪಗಳೆಲ್ಲ ಮಿಥ್ಯೆಯೇನು?’ ಭಗವತಿ ರತಿ ತಾಯಿಯ ವೇಷ ಧರಿಸಿ ನನ್ನನ್ನು ಸಮೀಪಿಸಿ ಹೇಳಿದಳು: ‘ನೀನು ಭಾವದಲ್ಲೇ ಇರು.’ (ಅಂದರೆ ಇದು ಸಾಕಾರಕ್ಕೂ ನಿರಾಕಾರಕ್ಕೂ ಮಧ್ಯೆ ಇರುವ ಒಂದು ಅದ್ಭುತ ಅವಸ್ಥೆ. ಈ ಅವಸ್ಥೆಯಲ್ಲಿ ಸಾಕಾರ ನಿರಾಕಾರ ಎರಡೂ ಸತ್ಯ ಎಂಬ ಬೋಧೆಯಾಗುತ್ತದೆ.) ನಾನು ಇದನ್ನು ಹಲಧಾರಿಗೆ ತಿಳಿಸಿದೆ. ಒಮ್ಮೊಮ್ಮೆ ನಾನು ಆಕೆಯ ಆದೇಶವನ್ನು ಮರೆತು ಕಷ್ಟಕ್ಕೀಡಾಗುತ್ತಿದ್ದೇನೆ. ಒಮ್ಮೆ ನಾನು ಹಲ್ಲು ಮುರಿದುಕೊಂಡೆ – ಭಾವದಲ್ಲಿ ಇಲ್ಲದೆ ಇದ್ದುದರಿಂದ. ಆದ್ದರಿಂದ ದೈವವಾಣಿಯೇ ಆಗಲಿ, ಅಥವಾ ಯಾವುದಾದರೂ ಪ್ರತ್ಯಕ್ಷ ಅನುಭವವೇ ಆಗಲಿ, ಆಕೆಯ ಆದೇಶಕ್ಕೆ ವಿರುದ್ಧವಾಗದವರೆಗೆ ಭಾವದಲ್ಲೇ ಇರುತ್ತೇನೆ.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೩೬)*

ಶ್ರೀರಾಮಕೃಷ್ಣರು ಭಾವಮುಖ ಸ್ಥಿತಿಯಲ್ಲಿದ್ದರು ಎಂದು ಹೇಳಲಾಗಿದೆ. ಅವರು ಆ ಸ್ಥಿತಿಯಲ್ಲಿರಲು ಭಗವತಿಯಿಂದ ಆದೇಶವಾಗಿತ್ತು. ಈ ಸ್ಥಿತಿ ಏನೆಂಬುದರ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ. ಸ್ವಾಮಿ ಶಾರದಾನಂದರು ತಮ್ಮ ಲೋಕಪ್ರಸಿದ್ಧ ಬೃಹದ್ ಗ್ರಂಥ ‘ಶ್ರೀರಾಮಕೃಷ್ಣ ಲೀಲಾಪ್ರಸಂಗ’ದಲ್ಲಿ ಈ ವಿಷಯವನ್ನು ಚರ್ಚಿಸಿದ್ದಾರೆ. ಅದರ ಸಂಕ್ಷೇಪ ವಿವರಣೆ: ೧) ಭಾವಮುಖ ಸ್ಥಿತಿ ಎಂದರೆ ವಿಶ್ವ ಅಹಂ ಒಡನೆ ಒಂದಾಗಿರುವುದು. ಶ್ರೀರಾಮಕೃಷ್ಣರ ಅಹಂ ವಿಶ್ವ ಅಹಂ ಅಂದರೆ ಈಶ್ವರನ ಅಹಂ ಒಂದಿಗೆ ಒಂದಾಗಿತ್ತು. ಇಲ್ಲಿ ‘ಈಶ್ವರ’ ಎಂದರೆ ಮಾಯಾ ಉಪಹಿತ ಚೈತನ್ಯ. ಮಾಯೆಯನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಈಶ್ವರನು ಜಗತ್ತನ್ನು ಸೃಷ್ಟಿ ಮಾಡುತ್ತಾನೆ. ಇದಕ್ಕೆ ಮುಂಚೆ ಅವನು ಸಂಕಲ್ಪಿಸುತ್ತಾನೆ: **ಸ ಈಕ್ಷತ ಬಹುಸ್ಯಾಂ ಪ್ರಜಾಯೇಯ** – ‘‘ನಾನು ಬಹುವಾಗಿ ಹುಟ್ಟುತ್ತೇನೆ.’’ ಈ ‘ನಾನು’ವೇ ವಿಶ್ವ ಅಹಂ. ಈ ಸಮಷ್ಟಿ ಅಹಂ ಒಂದಿಗೆ ಶ್ರೀರಾಮಕೃಷ್ಣರ ವ್ಯಷ್ಟಿ ಅಹಂ ಒಂದಾಗಿತ್ತು. ಆದ್ದರಿಂದಲೇ ಅವರಿಗೆ, ‘ಇದು ನನ್ನ ಭಾವ, ನನ್ನ ಅಭಿಪ್ರಾಯ, ಇದು ನನಗೆ ಸೇರಿದುದು’ ಇತ್ಯಾದಿಯಾಗಿ ಹೇಳಲಾಗುತ್ತಿರಲಿಲ್ಲ. ನಾನು, ನನ್ನದು ಎಂಬ ಭಾವನೆ ಅವರಲ್ಲಿರಲಿಲ್ಲ.

ಇಂತಹ ಭಾವಮುಖ ಸ್ಥಿತಿಯು ಪಾರಮಾರ್ಥಿಕ (absolute) ಮತ್ತು ವ್ಯಾವಹಾರಿಕ ಸತ್ತೆಯ (relation) ಮಧ್ಯದ ಸ್ಥಿತಿ – ಮನೆಯ ಹೊಸ್ತಿಲು ಇದ್ದ ಹಾಗೆ. ಶ್ರೀರಾಮಕೃಷ್ಣರು ಆ ಹೊಸ್ತಿಲಲ್ಲಿ ನಿಂತು ಎರಡೂ ಸ್ಥಿತಿಯನ್ನೂ ಅನುಭವಿಸುತ್ತಿದ್ದರು. ಅವರಿಗೆ ಎಲ್ಲವೂ ಭಾವನೆಗಳ ರೂಪದಲ್ಲಿ (ideas) ಕಾಣುತ್ತಿದ್ದವು, ಅವು ತಮ್ಮ ಸ್ಥೂಲ ರೂಪಗಳನ್ನು ಕಳೆದುಕೊಳ್ಳುತ್ತಿದ್ದವು, ಅಥವಾ ಗೌಣವಾಗಿ ತೋರುತ್ತಿದ್ದವು. ಎಲ್ಲವೂ ಚೈತನ್ಯಮಯವಾಗಿ ಕಾಣುತ್ತಿದ್ದವು.

೨) ಶ್ರೀರಾಮಕೃಷ್ಣರು ಎಲ್ಲ ಮಾನವ ಭಾವಗಳನ್ನೂ ಅರ್ಥ ಮಾಡಿಕೊಳ್ಳುವವರಾಗಿದ್ದರು. ಅವರು ನಾಸ್ತಿಕನನ್ನೂ ಸ್ವಾಗತಿಸಿದರು. ಸ್ತ್ರೀಪುರುಷ ಭಾವಗಳೆರಡೂ ಅವರಲ್ಲಿ ಮಿಳಿತಗೊಂಡಿದ್ದವು. ಅವರು ಕೆಲವೊಮ್ಮೆ ಎಷ್ಟು ಸಹಜವಾಗಿ ಸ್ತ್ರೀಯರಂತೆ ವರ್ತಿಸುತ್ತಿದ್ದರೆಂದರೆ ಗಿರೀಶಚಂದ್ರನು ಒಮ್ಮೆ ಅವರನ್ನು, ‘‘ನೀವು ಸ್ತ್ರೀಯರೊ ಪುರುಷರೊ?’’ ಎಂದು ಕೇಳಿದಾಗ, ‘‘ನನಗೆ ತಿಳಿಯದು’’ ಎಂದು ಉತ್ತರಿಸಿದರು, ಮುಗುಳ್ನಗೆಯೊಂದಿಗೆ. ‘ಮುಖ’ ಎಂದರೆ ಯಾವುದಾದರೂ ಕಡೆ ಚಲಿಸುವುದು (flowing towards) ಎಂದೂ ಅರ್ಥವಾಗುತ್ತದೆ. ಎಲ್ಲ ಭಾವಗಳೂ ಶ್ರೀರಾಮಕೃಷ್ಣರಲ್ಲಿ ಬಂದು ಸೇರಿದವು – ಎಲ್ಲ ನದಿಗಳು ಸಮುದ್ರವನ್ನು ಸೇರುವಂತೆ (**ಯಥಾ ನದೀನಾಂ ಬಹವೋಽಂಬುವೇಗಾಃ ಸಮುದ್ರಮೇವಾಭಿಮುಖಾ ದ್ರವಂತಿ**). ಶ್ರೀ ರವೀಂದ್ರನಾಥ ಠಾಕೂರರು ಶ್ರೀರಾಮಕೃಷ್ಣರ ಬಗ್ಗೆ ಬರೆಯುತ್ತಾರೆ:

‘‘Diverse courses of worship, varied springs of fulfilment have mingled in your meditation. The manifested revelation of the joy of Infinite has given form to the shrine of unity in your life.’’ (‘ವಿವಿಧ ಪೂಜಾಧಾರೆಗಳು, ಸಾರ್ಥಕ್ಯದ ವೈವಿಧ್ಯಮಯ ಸ್ರೋತಗಳು ನಿನ್ನ ಧ್ಯಾನಾಂಬುಧಿಯಲ್ಲಿ ಬಂದು ಒಂದಾದವು. ಆ ಅನಂತಾನಂದದ ಅಸಂಖ್ಯ ಅನುಭವಗಳು ನಿನ್ನ ಜೀವನ ಮಂದಿರದಲ್ಲಿ ಏಕತೆಯ ರೂಪವನ್ನು ಪಡೆದವು.’)

**‘ಮುಖ’** ಎನ್ನುವುದರ ಇನ್ನೊಂದು ಅರ್ಥ, ಯಾವುದರಿಂದ ಹೊರಹೊಮ್ಮುತ್ತದೋ ಅದು (issuing forth). ಎಲ್ಲ ಆಧ್ಯಾತ್ಮಿಕ ಭಾವಗಳೂ ಶ್ರೀರಾಮಕೃಷ್ಣರಿಂದ ಹೊರಹೊಮ್ಮುತ್ತಿದ್ದವು. ಅವರೇ ಕೊಡುವ ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಬಹುದು. ಬಟ್ಟೆಗೆ ಬಣ್ಣ ಹಾಕುವವನೊಬ್ಬನ ಹತ್ತಿರ

ಒಂದು ಪಾತ್ರೆಯಲ್ಲಿ ವಿಶಿಷ್ಟ ದ್ರವ್ಯವೊಂದಿತ್ತು. ಗಿರಾಕಿಗಳು ಬಟ್ಟೆಗೆ ಬಣ್ಣ ಹಾಕಿಸಿಕೊಳ್ಳಲು ಅವನೆಡೆಗ ಬರುತ್ತಿದ್ದರು. ಅವರವರಿಗೆ ಬೇಕಾದ ಬಟ್ಟೆಯ ಬಣ್ಣವನ್ನು ಒಂದೇ ದ್ರವದಲ್ಲಿ ಅದ್ದಿ ಕೊಡುತ್ತಿದ್ದನು. ಕೆಂಪು ಬೇಕಾದವನಿಗೆ ಕೆಂಪು, ಹಳದಿ ಬೇಕಾದವನಿಗೆ ಹಳದಿ ಇತ್ಯಾದಿ. ಯಾವನೋ ಗಿರಾಕಿಯು 'ಆ ಪಾತ್ರೆಯಲ್ಲಿರುವ ದ್ರವದ ಬಣ್ಣ ಯಾವದು?' ಎಂದು ಕೇಳಿದನಂತೆ. ವ್ಯಾಪಾರಿಯು ಮುಗುಳ್ನಕ್ಕನಂತೆ. ಹಾಗೆಯೇ ಶ್ರೀರಾಮಕೃಷ್ಣರಲ್ಲಿ ಎಲ್ಲ ಭಾವಗಳೂ ಇದ್ದವು. ವೈಷ್ಣವರಿಗೆ ಅವರು ವೈಷ್ಣವರಾಗಿದ್ದರು, ಶೈವರಿಗೆ ಅವರು ಶೈವರಾಗಿದ್ದರು, ಶಾಕ್ತರಿಗೆ ಶಾಕ್ತರು ಇತ್ಯಾದಿ. ಬೆಳಕು ಪ್ರಿಸಂ ಮೂಲಕ ಹರಿದು ಬರುವಾಗ ವಿವಿಧ ಬಣ್ಣಗಳಾಗಿ ಹೊರಹೊಮ್ಮುತ್ತದೆ. ಅದೇ ರೀತಿ ಆಧ್ಯಾತ್ಮಿಕ ಅನುಭವದ ಬೆಳಕು ಶ್ರೀರಾಮಕೃಷ್ಣರ ಮೂಲಕ ವಿವಿಧ ಭಾವಗಳಾಗಿ ಹೊರಹೊಮ್ಮಿತು. ಈ ದೃಷ್ಟಿಯಿಂದಲೂ ಶ್ರೀರಾಮಕೃಷ್ಣರ ಭಾವಮುಖ ಸ್ಥಿತಿಯನ್ನು ವಿವರಿಸಬಹುದು.

**'ಮುಖ'** ಎಂದರೆ ಯಾವುದಾದರೊಂದು ಕಡೆ ತಿರುಗಿಕೊಂಡಿರುವುದು, ಮುಖ ಮಾಡಿಕೊಂಡಿರುವುದು (facing towards). ಶ್ರೀರಾಮಕೃಷ್ಣರು ಯಾವಾಗಲೂ ಆಧ್ಯಾತ್ಮಿಕ ಭಾವದ ಕಡೆಗೇ ಮುಖಮಾಡಿಕೊಂಡಿದ್ದರು – ಹೂವು ಸೂರ್ಯನ ಕಡೆಗೆ ತಿರುಗಿಕೊಂಡಿರುವಂತೆ. ಅವರು ಹಾಗಿದ್ದುದರಿಂದ ಅತ್ಯಲ್ಪ ಸೂಚನೆಯೊಂದಿಗೆ ಅವರು ಆಧ್ಯಾತ್ಮಿಕ ಭಾವದಲ್ಲಿ ಮುಳುಗಿ ಮೈಮರೆಯುತ್ತಿದ್ದರು. ಎಲ್ಲರಿಗೂ ಅಧ್ಯಾತ್ಮದ ಕಡೆ ಏರುವುದಕ್ಕೆ ಕಷ್ಟವಾದರೆ ಶ್ರೀರಾಮಕೃಷ್ಣರಿಗೆ ಅದರಿಂದ ಕೆಳಗಿಳಿಯುವುದು ಕಷ್ಟವಾಗುತ್ತಿತ್ತು. ಹೀಗೆ ಈ ಭಾವಮುಖ ಸ್ಥಿತಿಯನ್ನು ಅನೇಕ ದೃಷ್ಟಿಕೋನಗಳಿಂದ ಅರ್ಥೈಸಲು ಸಾಧ್ಯ.

## ಭಗವದಿಚ್ಛೆ ಹಾಗೂ ಸ್ವ-ಇಚ್ಛೆ

ಶ್ರೀರಾಮಕೃಷ್ಣರು: ''ನಾನು ಯಂತ್ರ, ಭಗವತಿ ಯಂತ್ರಿ. ಆಕೆ ಮಾಡಿಸಿದಂತೆ ಮಾಡುತ್ತೇನೆ, ಹೇಳಿಸಿದಂತೆ ಹೇಳುತ್ತೇನೆ. ಇದು ಸುಂಟರ ಗಾಳಿಗೆ ಸಿಕ್ಕದ ಎಂಜಲೆಲೆಯ ಹಾಗೆ. ಅದು ಗಾಳಿ ಬೀಸಿದ ಹಾಗೆ, ಕೆಲವು ವೇಳೆ ಒಳ್ಳೆಯ ಸ್ಥಳಗಳಿಗೆ ಹೋಗಿ ಬೀಳುತ್ತದೆ; ಇನ್ನು ಕೆಲವು ವೇಳೆ ಚರಂಡಿಗೆ ಹೋಗಿ ಬೀಳುತ್ತದೆ. ಆ ಕಥೆಯಲ್ಲಿ ನೇಯ್ಗೆಯವನು ಹೇಳಿದ ಹಾಗೆ: ''ರಾಮನ ಇಚ್ಛೆಯಿಂದ ಕಳ್ಳತನವಾಯಿತು; ರಾಮನ ಇಚ್ಛೆಯಿಂದ ಪೊಲೀಸಿನವರು ನನ್ನನ್ನು ಹಿಡಿದರು; ಮತ್ತೆ ಅವರು ರಾಮನ ಇಚ್ಛೆಯಿಂದಲೇ ನನ್ನನ್ನು ಬಿಟ್ಟುಬಿಟ್ಟರು.'' *(ಅಲ್ಲೇ, ಪು. ೧೩೬)*

'ಸುಂಟರಗಾಳಿಗೆ ಸಿಕ್ಕಿದ ಎಂಜಲೆಲೆಯಂತೆ' ಎಂಬ ಉದಾಹರಣೆಗೆ ಎರಡು ಅರ್ಥವನ್ನು ನೀಡಬಹುದು. ಮೊದಲನೆಯದಾಗಿ, ಅನೇಕ ಪ್ರಭಾವಗಳಿಗೆ ಒಳಗಾಗಿ ಯಾವುದೇ ನೆಲೆಯಿಲ್ಲದೆ ಇರುವುದು. ಇದು ಸಾಮಾನ್ಯರ ಸ್ಥಿತಿ. ಅವರು ಬದಲಾಗುತ್ತಲೇ ಇರುತ್ತಾರೆ, ಅವರಿಗೆ ನಿರ್ದಿಷ್ಟ ವ್ಯಕ್ತಿತ್ವವೇ ಇರುವುದಿಲ್ಲ. ಅನೇಕ ಇಚ್ಛೆಗಳು ಅವರನ್ನು ಕುಣಿಸುತ್ತಿರುತ್ತವೆ, ಅವರು ಯಾವುದೇ ಆದರ್ಶದ ತಳಹದಿಯಿಲ್ಲದೆ ಅತಂತ್ರ ಸ್ಥಿತಿಯಲ್ಲಿ ಇರುತ್ತಾರೆ. ಅದೊಂದು ಗುಲಾಮತನವಾದರೂ ಅವರಿಗದು ಗೊತ್ತಿರುವುದಿಲ್ಲ, ತಾವು ಸ್ವತಂತ್ರವಾಗಿ ವರ್ತಿಸುತ್ತಿರುವುದಾಗಿಯೇ ಅವರು ಭಾವಿಸುತ್ತಾರೆ. ಎರಡನೆಯದಾಗಿ ಭಗವದಿಚ್ಛಾನುಸಾರವಾಗಿ ವರ್ತಿಸುವುದು. ಇಲ್ಲಿ ಒಂದೇ ಇಚ್ಛೆ ಕೆಲಸ ಮಾಡುತ್ತಿರುತ್ತದೆ, ಸ್ವ-ಇಚ್ಛೆಗೆ ಇಲ್ಲಿ ಸ್ಥಾನವಿಲ್ಲ. ಇದು ಪೂರ್ಣ ಶರಣಾಗತಿ, ಸಂತನ ಸ್ಥಿತಿ. ನಾವು ಸಾಮಾನ್ಯವಾಗಿ ಹೇಳುತ್ತೇವೆ, ಎಲ್ಲ ಭಗವಂತನ ಇಚ್ಛೆ ಎಂಬುದಾಗಿ. ಆದರೆ ನಮ್ಮ ಇಚ್ಛೆಗೆ ಧಕ್ಕೆ ಬಂದರೆ ನಮಗೆ ಸಹಿಸಲಾಗುವುದಿಲ್ಲ. ಸುಖದುಃಖಗಳೆರಡನ್ನೂ ಸಮಾನ ಮನಸ್ಸಿನಿಂದ ಸ್ವೀಕರಿಸುವ ಮನೋಭಾವವಿದ್ದರೆ ಅದು ಶರಣಾಗತಿಯ ಫಲ.

ಒಂದು ಚೀನೀ ಕಥೆ ಇದೆ. ಹಳ್ಳಿ ಪ್ರದೇಶದಲ್ಲಿ ಒಬ್ಬ ವ್ಯಕ್ತಿ ಇದ್ದ – ಅನುಭವಸ್ಥ, ಜೀವನವನ್ನು ಯಥಾರ್ಥ ದೃಷ್ಟಿಯಿಂದ ಕಾಣುವಂತಹವನು. ಒಂದು ದಿನ ಅವನ ಕುದುರೆ ಕಳವಾಯಿತು. ಊರಿನವರೆಲ್ಲ ಬಂದು ಸಹಾನುಭೂತಿಯಿಂದ ''ನಿನ್ನ ದುರದೃಷ್ಟ!'' ಎಂದು ಉದ್ಗರಿಸಿದರು. ಅವನು, ''ದುರದೃಷ್ಟವೊ ಅದೃಷ್ಟವೊ, ಯಾರಿಗೆ ಗೊತ್ತು!'' ಎಂದು ನಿರ್ಲಿಪ್ತನಾಗಿ ನುಡಿದನು. ಕೆಲವು ದಿನಗಳ ನಂತರ ಆ ಕುದುರೆಯು ಇನ್ನೊಂದು ಕುದುರೆಯೊಂದಿಗೆ ಹಿಂತಿರುಗಿ ಬಂತು. ಜನರೆಲ್ಲ ಬಂದು ''ನಿನ್ನ ಅದೃಷ್ಟವೊ ಅದೃಷ್ಟ!'' ಎಂದು ಕೊಂಡಾಡಿದರು. ಆತ ಮಾತ್ರ ಅದೇ ನಿರ್ಲಿಪ್ತತೆಯಿಂದ, ''ಅದೃಷ್ಟವೊ ದುರದೃಷ್ಟವೊ, ಯಾರಿಗೆ ಗೊತ್ತು!'' ನುಡಿದನು. ಮತ್ತೆ ಕೆಲವು ದಿನಗಳ ನಂತರ ಆತನ ಮಗ ಹೊಸ ಕುದುರೆಯ ಮೇಲೆ ಸವಾರಿ ಮಾಡುವಾಗ ಕೆಳಗೆ ಬಿದ್ದು ಕಾಲು ಮುರಿದುಕೊಂಡನು. ಮತ್ತೆ ಜನರು ಬಂದು, ''ಎಂಥ ದುರದೃಷ್ಟವಯ್ಯ ನಿನ್ನದು!'' ಎಂದು ಕನಿಕರದಿಂದ ಉದ್ಗರಿಸಿದರು. ಆತನು, ''ದುರದೃಷ್ಟವೊ ಅದೃಷ್ಟವೊ, ಯಾರಿಗೆ ಗೊತ್ತು!'' ಎಂದು ನಿರ್ಲಿಪ್ತತೆಯನ್ನು ವ್ಯಕ್ತಪಡಿಸಿದನು. ಮತ್ತೆ ಕೆಲವು ದಿನಗಳ ನಂತರ ಆ ಊರಿನ ರಾಜ ಸೈನ್ಯಕ್ಕೆ ಯುವಕರನ್ನು ಕಡ್ಡಾಯವಾಗಿ ಸೇರಿಸಿಕೊಳ್ಳಲು ಅಧಿಕಾರಿಗಳನ್ನು ಕಳಿಸಿದನು. ಈತನ ಮಗನಿಗೆ ಕಾಲು ಮುರಿದುದರಿಂದ ಅವನನ್ನು ಹಾಗೆಯೇ ಬಿಟ್ಟರು. ಮತ್ತೆ ಜನರು ಬಂದು ಇವನ ಅದೃಷ್ಟವನ್ನು ಕೊಂಡಾಡಿದರು, ಮತ್ತೆ ಅದೇ ನಿರ್ಲಿಪ್ತತೆ. ಹೀಗೆ ಎಲ್ಲವನ್ನೂ ಸಮಾನ ಮನಸ್ಸಿನಿಂದ ಸ್ವೀಕರಿಸುವ ಮನೋಭಾವವೇ ಶರಣಾಗತಿಯ ಚಿಹ್ನೆ.

## ಪರರ ಗುಣವನ್ನು ಆರೋಪಿಸಿಕೊಳ್ಳುವುದು

**ಶ್ರೀರಾಮಕೃಷ್ಣರು** (ಒಬ್ಬ ಯುವಕನಿಗೆ): ''ಪರರ ಗುಣವನ್ನು ಆರೋಪಿಸಿಕೊಂಡುದೇ ಆದರೆ ಮನುಷ್ಯ ಬದಲಾವಣೆ ಹೊಂದಿಬಿಡಬಲ್ಲ. ಪ್ರಕೃತಿಯ ಭಾವವನ್ನು ಆರೋಪಿಸಿಕೊಂಡರೆ ಕ್ರಮೇಣ ಕಾಮಾದಿ ರಿಪುಗಳು ನಾಶವಾಗಿ ಹೋಗುತ್ತವೆ. ನಡೆನುಡಿ ಎಲ್ಲ ಹೆಂಗಸರ ಹಾಗೆ ಆಗಿಬಿಡುತ್ತವೆ...'' *(ಅಲ್ಲೇ, ಪು. ೧೩೭)*

ಇಲ್ಲಿ ಗುಣಗಳನ್ನು ಎಂದರೆ ಸದ್ಗುಣಗಳನ್ನು ಎಂದು ಅರ್ಥ. ಇತರರ ಒಳ್ಳೆಯ ನಡತೆಯನ್ನು ನೋಡಿ, ಗಮನಿಸಿ ಅದರಂತೆ ನಡೆಯಲು ಪ್ರಯತ್ನಿಸುವುದು. ಇಲ್ಲಿ ಸತ್ಸಂಗಗಳ ಮಹತ್ವವನ್ನು ಕಾಣುತ್ತೇವೆ. ಸತ್ಪುರುಷರ ಒಡನೆ ಇದ್ದಾಗ, ಮನಸ್ಸು ತೆರೆದಿದ್ದಾಗ,

ಮತ್ತು ಸ್ವೀಕರಿಸುವ ಮನೋಭಾವ ಇದ್ದಾಗ ಸ್ವಾಭಾವಿಕವಾಗಿಯೇ ಅವರ ಗುಣಗಳು ನಮ್ಮೊಡನೆ ಒಂದಾಗಿಬಿಡುತ್ತವೆ — ಬೆಂಕಿಯ ಹತ್ತಿರವಿದ್ದಾಗ ಬೆಂಕಿಯ ಶಾಖ ನಮಗೆ ತಗಲುವಂತೆ. ಆದರೆ ದುರದೃಷ್ಟವೇನೆಂದರೆ, ನಾವು ಇತರರ ಗುಣವನ್ನು ನೋಡುವ ಬದಲು ದೋಷವನ್ನೇ ನೋಡುತ್ತೇವೆ, ಅದೇ ಎದ್ದು ಕಾಣುತ್ತದೆ – ನಮ್ಮಲ್ಲೂ ಆ ದೋಷ ಇರುವುದರಿಂದ. ಶ್ರೀ ವಿದ್ಯಾರಣ್ಯರ 'ಜೀವನ್ಮುಕ್ತಿವಿವೇಕ' ದಲ್ಲಿ ಒಂದು ಶ್ಲೋಕ ಬರುತ್ತದೆ:

**ಯಥಾ ಸುನಿಪುಣಃ ಸಮ್ಯಕ್ ಪರದೋಷೇಕ್ಷಣೇ ರತಃ ।**
**ತಥಾ ಚೇನ್ನಿಪುಣಃ ಸ್ವೇಷು ಕೋ ನ ಮುಚ್ಯೇತ ಬಂಧನಾತ್ ॥**

'ಪರರ ದೋಷವನ್ನು ಚೆನ್ನಾಗಿ ಗುರುತಿಸುವುದರಲ್ಲಿ ಒಬ್ಬನು ಎಷ್ಟು ನಿಪುಣನಾಗಿರುತ್ತಾನೋ, ತನ್ನ ದೋಷವನ್ನು ಹುಡುಕಿ ನೋಡುವುದರಲ್ಲಿ ಅಷ್ಟೇ ನಿಪುಣನಾಗಿದ್ದರೆ ಯಾರು ತಾನೇ ಬಂಧ ಮುಕ್ತನಾಗಲಾರ?'

ಆದರೆ ಪರಾನುಕರಣೆ ಒಳ್ಳೆಯದಲ್ಲ, ಅದು ಅವನತಿಯ ಚಿಹ್ನೆ – ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ''ಒಂದು ನರಿಯು ಸಿಂಹದ ವೇಷವನ್ನು ಧರಿಸಿಕೊಂಡ ಮಾತ್ರಕ್ಕೆ ಅದು ಸಿಂಹವಾಗುವುದಿಲ್ಲ'' ಎಂದು ಅವರು ಹೇಳುತ್ತಾರೆ. ಈಸೋಪನ ಕಥೆಯೊಂದಿದೆ: ಒಂದು ತೋಳಕ್ಕೆ ಸಾಕಷ್ಟು ಆಹಾರ ಲಭಿಸುತ್ತಿರಲಿಲ್ಲ. ಕುರಿಗಳೆಲ್ಲ ತಪ್ಪಿಸಿಕೊಂಡು ಓಡಿ ಹೋಗುತ್ತಿದ್ದವು. ಅದು ಒಂದು ಉಪಾಯ ಮಾಡಿತು. ಕುರಿಯ ಚರ್ಮವನ್ನು ಹೊದ್ದುಕೊಂಡು ಕುರಿಯಂತೆ ವೇಷ ಧರಿಸಿಕೊಂಡು ಕುರಿಗಳ ಮಂದೆಯ ಜತೆ ಇದ್ದರೆ, ಆಗಾಗ ಕುರಿಯನ್ನು ತಿನ್ನುತ್ತಿರಬಹುದು ಎಂದು ಯೋಚಿಸಿ ಹಾಗೆಯೇ ಮಾಡಿತು. ಕುರಿಯನ್ನು ಬಲಿಕೊಡಬೇಕಾಗಿ ಬಂದಾಗ ದಷ್ಟಪುಷ್ಟವಾಗಿದ್ದ ಕುರಿವೇಷದ ತೋಳವನ್ನೇ ಎಳೆದುಕೊಂಡು ಹೋಗಿ ಬಲಿಕೊಟ್ಟರು. ಆದ್ದರಿಂದ ಅನುಕರಣೆ ಕ್ಷೇಮವಲ್ಲ.

### ಭಗವದ್ ಕಲ್ಪನೆಯ ವಿವಿಧ ಹಂತಗಳು

**ಶ್ರೀರಾಮಕೃಷ್ಣರು :** ''ಭಗವಂತನ ಕಡೆ ಮುಂದುವರಿದಂತೆಲ್ಲ ಆತನ ಐಶ್ವರ್ಯ ಕಡಿಮೆ ಕಡಿಮೆಯಾಗಿ ಕಾಣಬರಲಾರಂಭಿಸುತ್ತದೆ. ಸಾಧಕನಿಗೆ ಮಾತ್ರ ಮೊದಲು ದೊರೆಯುತ್ತದೆ, ಹತ್ತು ಭುಜಗಳುಳ್ಳ ದೇವಿಯ ದರ್ಶನ. ಆ ಮೂರ್ತಿಯಲ್ಲಿ ಐಶ್ವರ್ಯ ಬಹಳವಾಗಿ ವ್ಯಕ್ತವಾಗಿರುತ್ತದೆ. ಅನಂತರ ಎರಡು ಭುಜಗಳುಳ್ಳ ದೇವಿಯ ದರ್ಶನ. ಆ ಮೂರ್ತಿಗೆ ವಿವಿಧ ಅಸ್ತ್ರಶಸ್ತ್ರಾಸ್ತ್ರಗಳನ್ನು ಹಿಡಿದಿರುವ ಹತ್ತು ಕೈಗಳಿರುವದಿಲ್ಲ. ಬಳಿಕ ಗೋಪಾಲ ಮೂರ್ತಿಯ ದರ್ಶನ ದೊರೆಯುತ್ತದೆ. ಅದರಲ್ಲಿ ಯಾವ ಐಶ್ವರ್ಯವೂ ಇರುವುದಿಲ್ಲ. ಅದು ಕೇವಲ ಹಾಲು ಹಸುಳೆಯ ಮೂರ್ತಿ. ಇವುಗಳಿಂದಾಚೆಗೂ ಕೆಲವು ದರ್ಶನಗಳಾಗುತ್ತವೆ. ಬಳಿಕ ಸಾಧಕನಿಗೆ ಕೇವಲ ಜ್ಯೋತಿಯ ದರ್ಶನ ಆಗುತ್ತದೆ.

''ಭಗವಂತನ ಸಾಕ್ಷಾತ್ಕಾರ ಪಡೆದ ನಂತರ, ಸಮಾಧಿಯಲ್ಲಿ ಆತನೊಡನೆ ಐಕ್ಯವಾದ ನಂತರ ಜ್ಞಾನ, ವಿಚಾರ ಎಲ್ಲ ನಿಂತು ಹೋಗಿಬಿಡುತ್ತವೆ. ಜ್ಞಾನ, ವಿಚಾರ ಎಲ್ಲಿಯವರೆಗೆ ಇರುತ್ತವೆ? ಬಹುತ್ವದ ಜ್ಞಾನವಿರುವರೆಗೆ – ಜೀವ, ಜಗತ್ತು, ನಾನು, ನೀನು ಇವೇ ಮೊದಲಾದವುಗಳ ಬೋಧೆ ಇರುವವರೆಗೆ. ಯಾವಾಗ ಸರಿಯಾಗಿ ಏಕತೆಯ ಜ್ಞಾನ ದೊರೆಯುವುದೋ ಆಗ ಸಾಧಕ ಶಾಂತನಾಗಿಬಿಡುತ್ತಾನೆ. ಉದಾಹರಣೆಗೆ ತ್ರೈಲಂಗಸ್ವಾಮಿ.''

*(ಅಲ್ಲೇ, ಪು. ೧೩೭)*

ಮಾನವನ ವಿಕಾಸದೊಂದಿಗೆ ಭಗವದ್ಭಾವನೆಯ ವಿಕಾಸವೂ ಹೇಗಾಗುತ್ತದೆ ಎಂಬುದನ್ನು ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ. ಸ್ಥೂಲ ಭಾವನೆಯು ಸೂಕ್ಷ್ಮವಾಗುತ್ತ ಹೋಗುತ್ತದೆ, ಸಗುಣಸಾಕಾರವು ನಿರ್ಗುಣ ನಿರಾಕಾರವಾಗುತ್ತ ಹೋಗುತ್ತದೆ (Personal becomes impersonal). ನರವಿಜ್ಞಾನ (Neuroscience) ದಲ್ಲಿಯೂ ಈ ವಿಷಯ ಬರುತ್ತದೆ. ಮಿದುಳಿನ ಬೆಳವಣಿಗೆಗೆ ಅನುಗುಣವಾಗಿ ಭಗವತ್ ಕಲ್ಪನೆಯೂ ಬದಲಾಗುತ್ತದೆ. ಮೆದುಳಿನಲ್ಲಿ ಮೊದಲ ಹೆಚ್ಚು ಬೆಳವಣಿಗೆಯನ್ನು ಹೊಂದಿರುವುದು ಭಾವೋದ್ವೇಗಕ್ಕೆ ಸಂಬಂಧಿಸಿದ Limbic region. ಮಾನವನು ವಿಕಾಸ ಹೊಂದಿದಂತೆ ವಿಚಾರಕ್ಕೆ ಸಂಬಂಧಿಸಿದ Neo cortex ಬೆಳೆಯುತ್ತ ಹೋಗುತ್ತದೆ. ಇದಕ್ಕನುಗುಣವಾಗಿ ಮೊದಲು authoritative ದೇವರ ಕಲ್ಪನೆಯಿತ್ತು, ಅಂದರೆ ದೇವರು ಸರ್ವಾಧಿಕಾರಿಯಂತೆ ನಿಷ್ಕರುಣೆಯಿಂದ ಜಗತ್ತನ್ನು ಆಳುತ್ತಿರುವನು, ಸಣ್ಣ ಪುಟ್ಟ ತಪ್ಪಿಗೂ ಕೋಪದಿಂದ ಶಿಕ್ಷೆ ವಿಧಿಸುವನು, ನರಕಕ್ಕೆ ತಳ್ಳುವನು. ಅಂತಹ ದೇವರು ನೋಡುವುದಕ್ಕೂ ವಿಕಾರವಾಗಿರುವನು. ಈಗಲೂ ಇಂತಹ ಭಗವತ್‌ಕಲ್ಪನೆ ಕಂಡುಬರುತ್ತದೆ.

ಮುಂದಿನ ಹಂತ ವಿಮರ್ಶಾತ್ಮಕ (critical) ದೇವರ ಕಲ್ಪನೆ. ಕೇವಲ ಭಾವೋದ್ವೇಗಕ್ಕೆ ಒಳಗಾಗಿ ಶಿಕ್ಷೆ ವಿಧಿಸದೆ, ವಿಮರ್ಶಾತ್ಮಕವಾಗಿ ನಿರ್ಣಯಿಸಿ ಶಿಕ್ಷೆ ವಿಧಿಸುತ್ತಾನೆ. ಇದರ ಮುಂದಿನ ಹಂತ ದೂರದ (distant) ದೇವರ ಕಲ್ಪನೆ–ಎಲ್ಲೋ ದೂರದಲ್ಲಿ, ಮೋಡಗಳಾಚೆ, ಯಾವುದೋ ಲೋಕದಲ್ಲಿ ದೇವರಿದ್ದಾನೆ ಎಂಬ ಭಾವನೆ; ದೂರದಿಂದ ನಮ್ಮನ್ನು ಆಳುತ್ತಿರುವನು (remote control) ಎಂಬ ಭಾವನೆ. ಮುಂದಿನ ಹಂತದಲ್ಲಿ ದೇವರು ನಮಗೆ ಹತ್ತಿರವಾಗುತ್ತಾನೆ, ಅವನು ಉದಾತ್ತನೂ, ಪ್ರಿಯನೂ, ದಯಾಮಯನೂ (benevolent) ಆಗುತ್ತಾನೆ. ಕೊನೆಯ ಹಂತ mystical God — ನಿರ್ಗುಣ-ನಿರಾಕಾರ ಭಗವತ್‌ಕಲ್ಪನೆ (impersonal). ಪ್ರಸಿದ್ಧ ನರವಿಜ್ಞಾನಿಯಾದ ಆ್ಯಂಡ್ರ್ಯೂ ನ್ಯೂಬರ್ಗ್ ಹೇಳುತ್ತಾರೆ: ''ದೇವರ ವಿವಿಧ ಕಲ್ಪನೆಗಳನ್ನು – ಸರ್ವಾಧಿಕಾರಿ, ವಿಮರ್ಶಾತ್ಮಕ, ದೂರದಲ್ಲಿರುವ ದಯಾಮಯನಾದ ಮತ್ತು ನಿರ್ವೈಯಕ್ತಿಕ ಮುಂತಾದವುಗಳನ್ನು, ಮೆದುಳಿನ ನರವ್ಯವಸ್ಥೆಯ ವಿಕಾಸ ಮತ್ತು ಬೆಳವಣಿಗೆಯೊಂದಿಗೆ ಸಮೀಕರಿಸಬಹುದೆಂಬುದು ನನ್ನ ಅಭಿಪ್ರಾಯ.'' *(**'How God changes your Brain?'**- P. 115, Ballantine Books, New York, 2010)* **(ಮುಂದುವರಿಯುವುದು)**